PAY AND ALLOWANCES TO GOVERNMENT SERVANTS

188. Sri G. PUTTASWAMY (Mudigere).—

Will the Minister for Finance be pleased to state:—

(*a*) whether the Government is intending to grant their servants the pay and allowances on par with those of Central Government;

(*b*) if not, the reasons therefor;

(*c*) whether the Government has taken any steps to obtain financial assistance from the Central Government in this behalf?

Sri M. Y. GHORPADE (Minister for Finance).—

(*a*) No.

(*b*) Due to paucity of funds.

(*c*) Yes.

ಶ್ರೀ ಜಿ. ಪುಟ್ಟಸ್ವಾಮಿ.—ನಾನು (ಎ) ನಲ್ಲಿ ಕೇಳಿರುವ ಪ್ರಶ್ನೆಗೆ 'ಇಲ್ಲ' ಎಂದು ಉತ್ತರ ಕೊಟ್ಟಿದ್ದೀರಿ. (ಸಿ) ಗೆ ಉತ್ತರವಾಗಿ "ಕೆಲವು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ" ಎಂದು ಹೇಳಿದ್ದೀರಿ. ಹಾಗಾದರೆ ಏನೇನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ಅದನ್ನು ಹೇಳಲು ಸಾಧ್ಯವೇ?

† ಶ್ರೀ ಎಂ. ವೈ. ಘೋರ್ಪಡೆ.—ಹಣಕಾಸಿನ ತೊಂದರೆ ಇರುವುದರಿಂದಾಗಿ ಎಲ್ಲ ವ್ಯತ್ಯಾಸಗಳನ್ನೂ ಒಂದೇ ಸಲ ಸರಿಪಡಿಸುವುದಕ್ಕೆ ಆಗುವುದಿಲ್ಲ. ಕೇಂದ್ರ ಸರಕಾರದವರು ಪ್ರತಿ ಸಾರಿಯೂ ಸಂಬಳ ಸಾರಿಗೆಗಳನ್ನು ಹೆಚ್ಚಿಸುವಾಗ ಅವರು ರಾಜ್ಯ ಸರಕಾರಕ್ಕೆ ಕೂಡ ಸ್ವಲ್ಪ ಮಟ್ಟಿನ ಗಮನ ಇಡಬೇಕೆಂದು ನಾವು ಪದೇ ಪದೇ ಅವರ ಗಮನಕ್ಕೆ ತರುತ್ತಿದ್ದಾಗ್ಯೂ ಅವರು ಇದರ ಕಡೆಗೆ ಗಮನ ಕೊಡುವುದಕ್ಕೆ ತಯಾರಿಲ್ಲ. ಕೇಂದ್ರ ಸರಕಾರಕ್ಕೆ ರಾಜ್ಯ ಸರಕಾರದವರು ಈ ರೀತಿ ಪದೇ ಪದೇ ಅವರ ನೌಕರರುಗಳಿಗೆ ಸಂಬಳ ಸಾರಿಗೆಗಳನ್ನು ಹೆಚ್ಚು ಮಾಡುತ್ತಾ ಹೋದರೆ ಅದರ ಪರಿಣಾಮ ರಾಜ್ಯ ಸರಕಾರಗಳ ಮೇಲೂ ಬರುತ್ತದೆ. ಆದರಂತೆ ಇಲ್ಲೂ ಡಿ. ಎ. ಜಾಸ್ತಿ ಮಾಡಬೇಕಾಗಿ ಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ಅವರಿಗೆ ಪದೇ ಪದೇ ಹೇಳುತ್ತಲೇ ಬರುತ್ತಿದ್ದೇವೆ. ಮೈಸೂರು ರಾಜ್ಯ ಒಂದೇ ಅಲ್ಲ ಬೇರೆ ಎಲ್ಲ ರಾಜ್ಯ ಸರಕಾರಗಳೂ ಇದನ್ನು ಕೇಂದ್ರ ಸರಕಾರದ ಗಮನಕ್ಕೆ ತರುತ್ತಿವೆ. ಮತ್ತೆ ಫೈನಾನ್ಸ್ ಕಮಿಷನ್ ಏನಿದೆ ಅವರ ಮುಂದೆ ಕೂಡ ನಮ್ಮ ರಾಜ್ಯದಲ್ಲಾಗುವ ಖರ್ಚು ಎಂದರೆ ಡಿ. ಎ. ಹಾಗೂ ಇನ್ನಿತರ ಅಲೋಯನ್ಸ್‌ಗಳ ಬಗ್ಗೆ ಕೇಂದ್ರ ಸರಕಾರ ಏನೂ ಮಾಡಿದರೂ ಹೆಚ್ಚು ಮಾಡಿದರೆ ರಾಜ್ಯ ಸರಕಾರಕ್ಕೂ ಡಿ. ಎ. ಹಾಗೂ ಅಲೋಯನ್ಸ್‌ಗಳ ಬಗ್ಗೆ ರಾಜ್ಯ ಸರಕಾರಗಳ ಡಿಮ್ಯಾಂಡನ್ನೂ ಸೇರಿಸಬೇಕೆಂದೂ ಒತ್ತಾಯ ಮಾಡಲಾಗಿದೆ. ಫೈನಾನ್ಸ್ ಕಮಿಷನ್‌ನವರು ರಾಜ್ಯ ಸರಕಾರಕ್ಕೆ ಬಂದಾಗ 1-1-72 ರಿಂದ ಡಿ. ಎ. ಯಾವ ರೀತಿ ಹೆಚ್ಚು ಮಾಡಲಾಗಿದೆ ಅದನ್ನೂ ಗಮನದಲ್ಲಿಟ್ಟುಕೊಂಡು ಅದರಿಂದ ನಮಗೆ ಬರುವ ಖರ್ಚಾವನ್ನು ಭರ್ತಿ ಮಾಡಬೇಕೆಂದೂ ಅವರನ್ನು ಕೇಳಲಾಗಿದೆ. ನಮ್ಮ ರಾಜ್ಯದ ಮಟ್ಟಿಗೆ ಕೇಂದ್ರದ ಸರಿಸಮಾನವಾಗುವಂತೆ ಡಿ. ಎ. ಕೊಡಬೇಕಾದರೆ ಸುಮಾರು ಐದು ಕೋಟಿ ರೂಪಾಯಿಯಷ್ಟು ಬರುತ್ತದೆ ಇದನ್ನು ಕೇಂದ್ರ ಸರಕಾರ ಪಡಿಸಬೇಕಾಗುತ್ತದೆ ಎಂದು ನಮ್ಮ ಡಿಮ್ಯಾಂಡನ್ನೂ ಸೇರಿಸಿದ್ದೇವೆ, ಇದರ ಜೊತೆಗೆ ಒಂದೇ ವರ್ಷದಲ್ಲಿ ನಮ್ಮ ಸರಕಾರ ಮೂರು ಸಾರಿ ಡಿ. ಎ. ಯನ್ನು ಜಾಸ್ತಿ ಮಾಡಿಕೊಡಲಾಗಿದೆ ಎಂದೂ ತಿಳಿಸಲಾಗಿದೆ. ಇನ್ನೂ ಹೆಚ್ಚು ಕೊಡಬೇಕಾದರೆ ಸುಮಾರು ಐದು ಕೋಟಿಯಷ್ಟು ಸೇರಿಸಿಬೇಕೆಂದು ಕೇಂದ್ರ ಸರಕಾರದ ಫೈನಾನ್ಸ್ ಕಮಿಷನ್‌ಗೆ ತಿಳಿಸಲಾಗಿದೆ. ಅದೇ ರೀತಿ ಕೇಂದ್ರ ಸರಕಾರಕ್ಕೂ ಹೇಳಿದ್ದರೂ ಅವರು ನೇರವಾಗಿ ಯಾವ ಜವಾಬುದಾರಿಯನ್ನೂ ಎಂದರೆ ರಾಜ್ಯ ಸರಕಾರದ ಸಂಬಳ ಸಾರಿಗೆಗಳು ಕೇಂದ್ರದವರಂತೆ ಸರಿಸಮಾನವಾಗಿ ಮಾಡಲು ಮತ್ತು ಅದರ ಖರ್ಚನ್ನು ವಹಿಸಲು ತಯಾರಿಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಹಿಂದೆ ನಮ್ಮ ಸರಕಾರ ಕೇಂದ್ರ ಸರಕಾರದ ಫೈನಾನ್ಸ್ ಕಮಿಷನ್ ಬಂದಾಗ ನಮ್ಮ ಸಚಿವರು ಡಿ. ಎ. ಹಾಗೂ ಸ್ಯಾಲರಿಯನ್ನು ಹೆಚ್ಚಿಸುವಾಗ ರಾಜ್ಯ ಸರಕಾರ ನೌಕರರುಗಳ ಹಿತವನ್ನೂ ಲಕ್ಷದಲ್ಲಿಡಬೇಕೆಂದು ಮತ್ತು ರಾಜ್ಯಸರಕಾರದ ಹಾಗೂ ಕೇಂದ್ರ ಸರಕಾರದವರ ಸಂಬಳದಲ್ಲಿ ತಾರತಮ್ಯವಿದೆ, ಮತ್ತು ಒಂದೇ ಆಫೀಸಿನಲ್ಲಿರುವ ರಾಜ್ಯ ಸರಕಾರದ ನೌಕರರಿಗೂ ಹಾಗೂ ಕೇಂದ್ರ ಸರಕಾರದ ನೌಕರರಿಗೂ ಸಂಬಳದಲ್ಲಿ ಹೆಚ್ಚು ವ್ಯತ್ಯಾಸವಿದೆ ಇದ್ದಿಂದ ನೌಕರರಲ್ಲಿ ಅತೃಪ್ತಿ ಹೆಚ್ಚಾಗುತ್ತದೆ ಮತ್ತು ಇನ್ ಎಫಿಷ್ನ್ಸಿ ಜಾಸ್ತಿಯಾಗುತ್ತದೆ, ಇದಕ್ಕಾಗಿ ರಾಜ್ಯ ಸರಕಾರದ ನೌಕರರುಗಳ ಸಂಬಳ ಸಾರಿಗೆಗಳನ್ನು ಕೇಂದ್ರದವರಂತೆ ಒಂದೇ ರೀತಿ ಮಾಡಲು ತಕ್ಕ ಕ್ರಮ ತೆಗೆದುಕೊಳ್ಳ ಬೇಕು ಎಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳಲು ಆಗುವುದಿಲ್ಲವೇ?

ಶ್ರೀ ಎಂ. ವೈ. ಘೋರ್ಪಡೆ.—ಪದೇ ಪದೇ ನಾವು ಕೇಂದ್ರ ಸರಕಾರದ ಮುಂದೆ ಇದರ ವಿಚಾರವನ್ನು ಹೇಳುತ್ತಲೇ ಬರುತ್ತಿದ್ದೇವೆ. ಅದಷ್ಟು ಮಟ್ಟಿಗೆ ನಮ್ಮ ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ನಮ್ಮ ರಾಜ್ಯದಲ್ಲೂ ಇರುವ ನೌಕರರುಗಳಿಗೆ ಸಾಕಷ್ಟು ಪ್ರಮಾಣದಲ್ಲಿ ಡಿ. ಎ. ಹೆಚ್ಚು ಮಾಡಲಾಗಿದೆ. ಒಂದೇ ವರ್ಷದಲ್ಲಿ ಮೂರು ಸಾರಿ ಡಿ. ಎ. ಜಾಸ್ತಿ ಮಾಡಲಾಗಿದೆ. ನಮ್ಮ ರಾಜ್ಯದಲ್ಲಿ ಈಗ ಕೊಡುತ್ತಿರುವ ಡಿ. ಎ. ಯನ್ನು ಇತರ ರಾಜ್ಯಗಳೊಡನೆ ಹೋಲಿಸಿ ನೋಡಿದರೆ ನಮ್ಮ ರಾಜ್ಯದಲ್ಲಿ ಕೊಡುತ್ತಿರುವ ಡಿ. ಎ. ಆಷ್ಟೇನೂ ಕಡಿಮೆ ಇಲ್ಲ. ಬೇರೆ ರಾಜ್ಯಗಳಿಗಿಂತ ಕೆಲವು ಸಂದರ್ಭಗಳಲ್ಲಿ ಜಾಸ್ತಿಯಾಗಿಯೇ ಇದೆ. ಇದರ ಅಂಕೆ ಸಂಖ್ಯೆಗಳನ್ನು ನೋಡಿದರೆ ತಮಗೇ ಗೊತ್ತಾಗುತ್ತದೆ. ಉದಾಹರಣೆಯಾಗಿ ಹೇಳುವುದಾದರೆ. ಸಂಬಳ 85 ಕ್ಕಿಂತ ಕಡಿಮೆ ಬರತಕ್ಕ ನೌಕರರುಗಳಿಗೆ ಕೇಂದ್ರ ಸರಕಾರದಲ್ಲಿ ಡಿ. ಎ, ಒಂದನೂರು ರೂಪಾಯಿ ಇದ್ದರೆ ನಮ್ಮ ರಾಜ್ಯದಲ್ಲಿ 95 ರೂಪಾಯಿಗಳಿವೆ. ಮಹಾರಾಷ್ಟ್ರದಲ್ಲಿ 88 ರೂಪಾಯಿ ಇದೆ, ಆಂಧ್ರದಲ್ಲಿ 84 ರೂಪಾಯಿ ಇದೆ. ಕೇರಳದಲ್ಲಿ 89 ರೂಪಾಯಿ ಇದೆ. ಬೇರೆ ರಾಜ್ಯಗಳಿಂತ ನಮ್ಮ ರಾಜ್ಯದಲ್ಲಿ ಕೊಡುವ ಡಿ. ಎ. ಜಾಸ್ತಿಯಾಗಿದೆ. ಆ ಮೇಲೆ 85 ರಿಂದ 89 ರೂಪಾಯಿಗಳ ರೇಂಜ್‌ನಲ್ಲಿ ನೋಡೋಣವಾದರೆ, ಕೇಂದ್ರದಲ್ಲಿ 112 ರೂಪಾಯಿ ಇದೆ. ನಮ್ಮ ರಾಜ್ಯದಲ್ಲಿ 99 ರೂಪಾಯಿ ಇದೆ. ಮಹಾರಾಷ್ಟ್ರದಲ್ಲಿ 94 ರೂಪಾಯಿ ಇದೆ. ಆಂಧ್ರದಲ್ಲಿ 84 ರೂಪಾಯಿ ಇದೆ. ಕೇರಳದಲ್ಲಿ 89 ರೂಪಾಯಿ ಇದೆ. ಈ ರೀತಿ ನೋಡಿದರೆ ನಮ್ಮ ರಾಜ್ಯದಲ್ಲಿ ಕೊಡುತ್ತಿರುವ ಡಿ. ಎ. ನೇ ಜಾಸ್ತಿಯಾಗಿದೆ. ಬೇಸಿಕ್ ಪೇನಲ್ಲಿ ಮಹಾ ರಾಷ್ಟ್ರ ಒಂದನ್ನು ಬಿಟ್ಟರೆ ಇತರ ರಾಜ್ಯಗಳಲ್ಲಿ ಬಹು ಕಡಿಮೆ ಇದೆ.

ನಮ್ಮ ನೌಕರರಿಗೂ ಕೇಂದ್ರಕ್ಕೆ ಸರಿಸಮಾನವಾದ ಡಿ. ಎ. ಕೊಡಬೇಕೆಂಬ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಆ ಉದ್ದೇಶದಿಂದ ಮೂರು ಸಲ ಡಿ. ಎ. ಜಾಸ್ತಿ ಮಾಡಿದ್ದೇವೆ. ಕೇಂದ್ರಕ್ಕೆ ಸರಿಸಮಾನವಾದ ಡಿ. ಎ. ಕೊಡಬೇಕಾದರೆ ಇನ್ನೂ ಐದು ಕೋಟಿ ರೂಪಾಯಿ ಬೇಕಾಗುತ್ತದೆ. ಅದು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಅವಲಂಬಿಸಿದೆ.

1-30 P.M.

ಪೇ ಸ್ಕೇಲ್ ಬಗ್ಗೆ ಒಂದೆರಡು ಮಾತು. ಈಕ್ವಲ್ ವರ್ಕ್ ಈಕ್ವಲ್ ಪೇ ಎನ್ನುವುದು ಏನಿದೆ ಅದನ್ನು ತಾತ್ಪೀಕವಾಗಿ ಯಾರೂ ಅಲ್ಲಗಳೆಯುವುದಕ್ಕಾಗುವುದಿಲ್ಲ. ಅದು ಸರಿ ಇದೆ. ಆದರೆ ಅದನ್ನು ಕಾರ್ಯಗತ ಮಾಡುವುದರಲ್ಲಿ ಬೇಕಾದಷ್ಟು ಪ್ರಾಕ್ಟಿಕಲ್ ಡಿಫಿಕಲ್ಟೀಸ್, ತೊಂದರೆಗಳಿವೆ. ಐತಿಹಾಸಿಕವಾಗಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಬೇರೆ ಬೇರೆ ಪೇ ಸ್ಕೇಲ್ ಪ್ಯಾಟರ್ನ್ ಬೆಳೆದು ಬಂದಿದೆ. ಒಂದೇ ಸಲ ಸರಿಸಮಾನವಾಗಿ ಮಾಡಬೇಕಾದರೆ ಪ್ರಾಕ್ಟಿಕಲ್ ಡಿಫಿಕಲ್ಟೀಸ್ ಇವೆ. ನಮ್ಮ ದೇಶದಲ್ಲಲ್ಲ ಮಾತ್ರವಲ್ಲ ಬೇರೆ ದೇಶಗಳಲ್ಲಿ ಎಲ್ಲೆಲ್ಲಿ ಫೆಡರಲ್ ಸ್ಟ್ರಕ್ಚರ್ ಇದೆ ಅಲ್ಲಿ ಕೂಡ ಇಂಥ ವ್ಯತ್ಯಾಸಗಳಿವೆ. ಲೋಯರ್ ಲೆವಲ್‌ನಲ್ಲಿ ಜಾಬ್ಸ್ ಕಂಪೇರ್ ಮಾಡಬಹುದು. ಅದನ್ನು ಬಿಟ್ಟು ಹುದ್ದೆಗಳ ಡೆಸಿಗ್ನೇಷನ್ ಆಧಾರದ ಮೇಲೆ ಈಕ್ವಲ್ ವರ್ಕ್ ಹೋಲಿಸುವುದಕ್ಕೆ ಹೋದರೆ ಬಹಳ ಗೊಂದಲಕ್ಕೆ ಅವಕಾಶ ಮಾಡಿಕೊಟ್ಟಂತೆ ಆಗುತ್ತದೆ. ಕೇಂದ್ರಕ್ಕೂ ರಾಜ್ಯಕ್ಕೂ ವ್ಯತ್ಯಾಸವಿರಬಹುದು. ರಾಜ್ಯದಲ್ಲಿರುವ ಸಂಬಳಗಳಿಗೂ, ಸ್ಥಳೀಯ ಸಂಸ್ಥೆಗಳಲ್ಲಿರುವ ಸಂಬಳಗಳನ್ನು ಹೋಲಿಸಿದರೆ ಅಲ್ಲಿ ಕೂಡ ಬೇಕಾದಷ್ಟು ವ್ಯತ್ಯಾಸ ಕಾಣುತ್ತದೆ ಪಬ್ಲಿಕ್ ಸೆಕ್ಟಾರ್ ಮತ್ತು ಪ್ರೈವೇಟ್ ಸೆಕ್ಟಾರಿನಲ್ಲಿ ಕೂಡ ಬೇಕಾದಷ್ಟು ವ್ಯತ್ಯಾಸಗಳಿವೆ. ಅದೂ ಅಲ್ಲದೆ ಈಕ್ವಲ್ ಪೇ ಈಕ್ವಲ್ ವರ್ಕ್ ಎನ್ನಬಹುದು. ಆದರೆ ನಮ್ಮಲ್ಲಿ ಲಿವಿಂಗ್ ವೇಜ್ ಎಂದು ಏನು ಹೇಳುತ್ತಾರೆ ಅದನ್ನು ಕೂಡ ಕೊಡುವುದಕ್ಕೆ ಆಗುತ್ತಿಲ್ಲ. ಈ ಎಲ್ಲ ದೃಷ್ಟಿಯಿಂದ ನ್ಯಾಷನಲ್ ಇನ್‌ಕಂ ಮತ್ತು

(ಶ್ರೀ ಎಂ. ಪೈ. ಫೋರ್ಡೆ)

ಪೇಜ್ ಪಾಲಸಿ ಮಾಡಬೇಕು, ಅದಷ್ಟೂ ಈ ವ್ಯತ್ಯಾಸಗಳನ್ನು ಸರಿಪಡಿಸಬೇಕು ಎಂದು ಕೇಂದ್ರ ಸರ್ಕಾರಕ್ಕೆ ಹೇಳುತ್ತಿದ್ದೇವೆ. ಕೇಂದ್ರ ಸರ್ಕಾರದವರೂ ಕೂಡ ಇದನ್ನು ತಾತ್ವಿಕವಾಗಿ ಒಪ್ಪಿದ್ದಾರೆ. ಆದರೆ ಪ್ರಾಕ್ಟಿಕಲ್ ಆಗಿ ಒಂದೇ ವರ್ಷದಲ್ಲಿ ಇಡೀ ರಾಜ್ಯದಲ್ಲಿ ಮತ್ತು ಎಲ್ಲ ಸಂಸ್ಥೆಗಳಲ್ಲಿ ಈಕ್ವಲ್ ಪೇ ಮತ್ತು ಈಕ್ವಲ್ ವರ್ಕ್ ಎಂಬ ಸಿದ್ಧಾಂತವೇನಿದೆ ಅದನ್ನು ಕಾರ್ಯರೂಪಕ್ಕೆ ತರುವುದು ಅಷ್ಟೊಂದು ಸುಲಭವಾದುದಲ್ಲವೆಂದು ಹೇಳುತ್ತೇನೆ. ಆದರೂ ಕೂಡ ಮೈಸೂರು ರಾಜ್ಯದಲ್ಲಿ 1957 ರಿಂದ 1970 ರವರೆಗೆ ಪೇ ಸ್ಕೇಲ್ ರಿವಿಜನ್ ಮೂರು ಸಲವಾಗಿದೆ. ನಾಲ್ಕನೇ ಪಂಚವಾರ್ಷಿಕ ಯೋಜನೆಯಲ್ಲಿ ಪೇ ಸ್ಕೇಲ್ ರಿವಿಷನ್‌ನಿಂದ ಮತ್ತು ಡಿ. ಎ. ರಿವಿಷನ್‌ನಿಂದ 79 ಕೋಟಿ ರೂಪಾಯಿ ಖರ್ಚಾಗಿದೆ. ಈ ಹೊತ್ತು ಒಟ್ಟು ನಂಬಳ ನಮ್ಮ ರಾಜ್ಯದಲ್ಲಿ, ಏಡೆಡ್ ಇನ್‌ಸ್ಟಿಟ್ಯೂಷನ್ಸ್ ಸೇರಿ, 115 ಕೋಟಿ ರೂಪಾಯಿ ವರ್ಷಕ್ಕೆ ಕೊಡುತ್ತಿದ್ದೇವೆ. ಇದನ್ನು ನಮ್ಮ ಆದಾಯಕ್ಕೆ ಹೋಲಿಸಿದರೆ, ನಮ್ಮ ಆದಾಯ 310 ಕೋಟಿ ರೂಪಾಯಿ ಇದ್ದರೆ ಸುಮಾರು 37 ಪರ್ಸೆಂಟ್ ನಷ್ಟು ನಂಬಳ ಸಾರಿಗೆಗಳಿಗಾಗಿ ರಾಜ್ಯದ ರೆವೆನ್ಯೂನಲ್ಲಿ ಹೋಗುತ್ತಿದೆ ಅದ ಕಾರಣ ಮಿತಿ ಮೀರಿ ಜಾಸ್ತಿ ಮಾಡಿದರೆ ನಮ್ಮ ಪ್ರಗತಿಗೆ ಹೆಚ್ಚು ಧಕ್ಕೆಯಾಗುತ್ತದೆ. ಸರ್ಕಾರಿ ನೌಕರರ ಕಡೆಯಿಂದ ಈ ಪ್ರಶ್ನೆ ಪದೇ ಪದೇ ಬರುತ್ತಿದೆ. ಸರ್ಕಾರ ಇದರ ಬಗ್ಗೆ ಸಹಾನುಭೂತಿಯನ್ನು ತೋರಿಸಿದೆ. ಮತ್ತು ಈ ವಿಚಾರವನ್ನು ಅವರು ಯಾವಾಗಲೂ ಗಮನದಲ್ಲಿಟ್ಟುಕೊಳ್ಳುತ್ತಾರೆ. ಅದನ್ನು ತಿಳಿದುಕೊಳ್ಳದೆ ಹಠ ಮಾಡಿದರೆ ಸ್ವಲ್ಪ ಒಳ್ಳೆಯದಲ್ಲ. ಇಷ್ಟು ಮಾತ್ರ ನಾನು ಸ್ಪಷ್ಟವಾಗಿ ಹೇಳುತ್ತೇನೆ, ಹಣಕಾಸಿನ ಪರಿಸ್ಥಿತಿಯನ್ನು ತಿಳಿದುಕೊಂಡು ಏನೇನು ಮಾಡಲಿಕ್ಕೆ ಸಾಧ್ಯವಿದೆ ಅದನ್ನು ಮಾಡುವ ವಿಚಾರ ಸರ್ಕಾರಕ್ಕೆ ಇದೆ. ರಿಯಲ್ ವೇಜಸ್ ಏನಿದೆ ಅದನ್ನು ಕಾಪಾಡುವ ದೃಷ್ಟಿಯಿಂದ ಈ ಒಂದು ವಿಚಾರ ನಮ್ಮ ರಾಜ್ಯದಲ್ಲಿ ನಡೆಯುತ್ತಿದೆ. ಬಳ್ಳಾರಿಯಲ್ಲಿ ನಡೆದ ಎನ್. ಜಿ. ಓ. ಸಮ್ಮೇಳನದಲ್ಲಿ ತುಟ್ಟಿಭತ್ಯವನ್ನು ಕೊಡುವ ವಿಚಾರ ಹಾಗೆ ಇರಲಿ, ನ್ಯಾಯವಾದ ಬೆಲೆಗೆ ಅತ್ಯಾವಶ್ಯಕ ವಸ್ತುಗಳೇನಿವೆ ಅದನ್ನು ಒದಗಿಸುವಂಥ ಕಾರ್ಯಕ್ರಮವನ್ನು ಕೈಕೊಂಡರೆ ಅದಕ್ಕೆ ಸರ್ಕಾರ ಸಹಾಯ ಮಾಡಲಿಕ್ಕೆ ತಯಾರಿದೆ ಎಂದು ತಿಳಿಸಲಾಯಿತು. ಆ ಪ್ರಕಾರವಾಗಿ ಎನ್. ಜಿ. ಓ. ಸಂಘದವರು ಒಂದು ಪ್ರಪೋಜಲ್ ಕೊಟ್ಟಿದ್ದಾರೆ ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಹೊಂಡೂರಿನಲ್ಲಿ ಕಾರ್ಮಿಕ ಸಂಘದವರು ಒಂದು ಡಿಪಾರ್ಟ್‌ಮೆಂಟರ್ ಸ್ಟೋರ್ ಮಾಡಿದ್ದಾರೆ. ಅದನ್ನು ಮಾಡಿದ ನಂತರ ನೇಕಡ 15 ರಷ್ಟು ಖರ್ಚು ಕಡಮೆಯಾಗಿದೆ ಎಂದರೆ ತಿಂಗಳಿಗೆ 300 ರೂಪಾಯಿ ಖರ್ಚು ಮಾಡುತ್ತಿದ್ದವನು 2 ೦ ರೂಪಾಯಿ ಮಾತ್ರ ಖರ್ಚು ಮಾಡುತ್ತಿದ್ದಾನೆ, ಎಂದರೆ 15 ಪರ್ಸೆಂಟ್‌ನಷ್ಟು ಕಾಸ್ಟ್ ಆಫ್ ಲಿವಿಂಗ್ ಇಂಡಕ್ಸ್‌ನಲ್ಲಿ ಕಡಮೆಯಾಯಿತು. 200—300 ರೂಪಾಯಿ ಖರ್ಚು ಮಾಡುವವರಿಗೆ 40—50 ರೂಪಾಯಿ ಉಳಿತಾಯವಾಗುವುದಾದರೆ ಡಿ. ಎ. ಕೊಡುವುದರ ಹತ್ತರಷ್ಟು ಅನುಕೂಲವಾಗುತ್ತದೆ. ಈ ದಿಕ್ಕಿನಲ್ಲಿ ನಾವು ಪ್ರಯತ್ನ ಮಾಡಬೇಕು. ಎನ್. ಜಿ. ಓ. ಸಂಘದವರು ಈ ದಿಕ್ಕಿನಲ್ಲಿ ಪ್ರಯತ್ನ ಮಾಡುವುದಕ್ಕೆ ಒಪ್ಪಿದ್ದಾರೆ, ಅವರು ಪ್ರಪೋಸಲ್ ಕೊಟ್ಟಿದ್ದಾರೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ. ಆ ಬಗ್ಗೆ ಸರ್ಕಾರ ಸಂಪೂರ್ಣವಾಗಿ ಬೆಂಬಲವನ್ನು ಕೊಡುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

AMENDMENT OF THE BANGALORE MUNICIPAL CORPORATION ACT, 1949.

218. Sri T. R. SHAMANNA (Fort).—

Will the Minister for Municipal Administration be pleased to state:—

(*a*) whether there is a proposal to amend the Bangalore Municipal Corporation Act, 1949 to suit the present day civic needs;

(*b*) if so, the stage at which the proposal stands?